ಈ) ವರ್ಷ ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತ

2008–09 ರೂ. 1.96 ಕೋಟಿ

2009–10 ರೂ. 58.73 ಕೋಟಿ

2010–11 ರೂ. 83.58 ಕೋಟಿ

ಪಹಣಿ ಪೋಡಿ ಹಾಗೂ ಹಕ್ಕುಪತ್ರಗಳ ಬದಲಾವಣೆ ಸರ್ವೆ ಕಾರ್ಯ

21(42): ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯಲ್ಲಿ ಪಹಣಿ ಪೋಡಿ ಹಕ್ಕು ಬದಲಾವಣೆ ಮತ್ತು ಸರ್ವೆ ಕಾರ್ಯಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು? ಹಾಗೂ ಈ ವಿಳಂಬವನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಈ ಕಾರ್ಯಗಳನ್ನು ನಿರ್ವಹಿಸಲು ಸಮರ್ಪಕವಾದ ಎಷ್ಟು ಸಿಬ್ಬಂದಿ ನೌಕರರುಗಳು ಇದ್ದಾರೆ?

ಈ) ಸಿಂಧನೂರು ತಾಲ್ಲೂಕಿನಲ್ಲಿ ಬಾಕಿ ಇರುವ ಹಕ್ಕು ಬದಲಾವಣೆ ಪಹಣಿ ಮತ್ತು ಪೋಡಿಗಳ ಸಂಖ್ಯೆ ಎಷ್ಟು?

ಉ) ಈ ವಿಳಂಬಕ್ಕೆ ಕಾರಣರಾಗಿರುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಹೌದು.

ಆ) ರಾಯಚೂರು ಜಿಲ್ಲೆಯು ಹಿಂದಿನ ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ್ದು ಆ ಸಂದರ್ಭದಲ್ಲಿ ಭೂದಾಖಲೆಗಳ ತಯಾರಿಕೆ ಬಗ್ಗೆ ಅವಶ್ಯಕ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದ ಕಾರಣ ಹಿಸ್ಸಾ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿತ್ತು. ಆದರೆ ಸದರಿ ಹಿಸ್ಸಾ ಸರ್ವೆ ಕಾಲದಲ್ಲಿ ತಯಾರಿಸಿದಂತೆ ಇಂಡೀಕರಣ ಕಾರ್ಯವನ್ನು ಯಥಾವತ್ತಾಗಿ ಅನುಷ್ಠಾನ ಗೊಳಿಸಲಾದ ಕಾರಣ ಆಕಾರಬಂದ್ ವಿಸ್ತೀರ್ಣಕ್ಕೆ ಹಾಗೂ ಪಹಣಿ ವಿಸ್ತೀರ್ಣಕ್ಕೆ ತಾಳೆಯಾಗುತ್ತಿರುವುದಿಲ್ಲ. ಇದರಿಂದಾಗಿ ಶೇಕಡಾ 80ರಷ್ಟು ಪ್ರಕರಣಗಳಲ್ಲಿ ಪಹಣಿ ತಿದ್ದುಪಡಿ ಕಾರ್ಯ ಪೂರ್ಣಗೊಳಿಸಿ 11 ಇ ನಕ್ಷೆ ವಿತರಿಸಲಾಗುತ್ತಿದೆ. ಇದರಿಂದ ಸ್ವಲ್ಪ ಮಟ್ಟಿಗೆ ವಿಳಂಬವಾಗಿರುತ್ತದೆ.

ಈ ವಿಳಂಬವನ್ನು ತಪ್ಪಿಸಲು ಕೇಂದ್ರ ಕಛೇರಿಯಿಂದ ಉಪ ನಿರ್ದೇಶಕರವರನ್ನು ನಿಯೋಜಿಸಿ ಈ ಬಗ್ಗೆ ಕಾರ್ಯಾಗಾರ ನಡೆಸಿ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕಂದಾಯ ಇಲಾಖೆಯು ಸಿಬ್ಬಂದಿಯ ಪೂರ್ಣ ಸಹಕಾರ ಮತ್ತು ಸಮನ್ವಯದೊಂದಿಗೆ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ. ಭೂಮಾಪಕರ ಕೊರತೆಯನ್ನು ನಿವಾರಿಸಲು ಹೆಚ್ಚುವರಿಯಾಗಿ ಪರವಾನಗಿ ಭೂಮಾಪಕರನ್ನು ರಾಯಚೂರು ಜಿಲ್ಲೆಗೆ ನಿಯೋಜಿಸಲಾಗಿದೆ ಮತ್ತು ಆ ಜಿಲ್ಲೆಯಲ್ಲಿ ಲಭ್ಯವಿರುವ ಸರ್ಕಾರಿ ಭೂಮಾಪಕರುಗಳನ್ನು ಅಗತ್ಯತೆಗನುಸಾರ ಮರು ಹಂಚಿಕೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ಈ ಕಾರ್ಯವನ್ನು ನಿರ್ವಹಿಸಲು 56 ಹುದ್ದೆ ಮಂಜೂರಿಯಾಗಿದ್ದು 37 ಜನ ಸರ್ಕಾರಿ ಭೂ ಮಾಪಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೇ 54 ಜನ ಪರವಾನಗಿ ಭೂಮಾಪಕರು ಇರುತ್ತಾರೆ.

ಈ) ಸಿಂಧನೂರು ತಾಲ್ಲೂಕಿನಲ್ಲಿ 1 ಭೂ ಸ್ವಾಧೀನ ಕಡತಗಳು, 282 ಮ್ಯುಟೇಷನ್ ಪ್ರಕರಣಗಳು, ಪೋಡಿಗಾಗಿ ಬಾಕಿ ಇರುತ್ತದೆ.

ಉ) 11ಇ ನಕ್ಷೆ ವಿತರಣೆಯಲ್ಲಿ ವಿಳಂಬವಾಗಲು ಕಾರಣರಾದ ಸಿಬ್ಬಂದಿಗೆ ನೋಟೀಸು ನೀಡಿ ಎಚ್ಚರಿಕೆಯನ್ನು ನೀಡಲಾಗಿದೆ. ಪರವಾನಗಿ ಭೂ ಮಾಪಕರಲ್ಲಿ 6 ಜನರ ಪರವಾನಗಿಯನ್ನು ಅಮಾನತ್ತು ಗೊಳಿಸಲಾಗಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಅಕಾಡೆಮಿಗಳ ನೇಮಕಾತಿ

23(15): ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕನ್ನಡ ಮತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ವಿವಿಧ ಅಕಾಡೆಮಿಗಳು ಯಾವುವು? (ವಿವರವಾದ ಮಾಹಿತಿ ನೀಡುವುದು);

ಆ) ಈ ಅಕಾಡೆಮಿಗಳು ಸುವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಲು ಸರ್ಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ?

ಇ) ಈ ಅಕಾಡೆಮಿಗಳ ಸದಸ್ಯರನ್ನು ಆಯ್ಕೆ ಮಾಡುವಾಗ ಅನುಸರಿಸುತ್ತಿರುವ ಕ್ರಮಗಳೇನು ಹಾಗೂ ಎಷ್ಟು ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. (ವಿವರ ನೀಡುವುದು);